




# ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ವ್ಯಕ್ತಿ ಪರಿಚಯ



# ಡಾ. ಮೂಡ್ನಾಕೂಡು ಚಿನ್ನಸ್ವಾಮಿ

| | | |
|---|---|---|
| ಹೆಸರು | : | ಚಿನ್ನಸ್ವಾಮಿ ಬಿ. |
| ಕಾವ್ಯನಾಮ | : | ಮೂಡ್ನಾಕೂಡು ಚಿನ್ನಸ್ವಾಮಿ |
| ಸ್ಥಳ | : | ಮೂಡ್ನಾಕೂಡು, ಚಾಮರಾಜನಗರ ಜಿಲ್ಲೆ. |
| ಜನನ | : | 22–9–1954 |
| ಪೋಷಕರು | : | ತಾಯಿ ಗೌರಮ್ಮ, ತಂದೆ ಬಸವರಾಜಯ್ಯ |
| ಶಿಕ್ಷಣ | : | ಎಂ.ಕಾಂ., ಎಂ.ಎ.(ಕನ್ನಡ), ಡಿ.ಲಿಟ್., |
| ವೃತ್ತಿ ಅನುಭವ | : | ನಿವೃತ್ತ ನಿರ್ದೇಶಕರು (ಹಣಕಾಸು) ಹಾಗೂ ಆರ್ಥಿಕ ಸಲಹೆಗಾರರು, ಬೆಂಗಳೂರು ಮಹಾನಗರ ಸಾರಿಗೆ ನಿಗಮ. 2014 ರಲ್ಲಿ ನಿವೃತ್ತಿ.<br>ಕರ್ನಾಟಕ ವಸತಿಶಾಲೆ ಶಿಕ್ಷಣಸಂಸ್ಥೆಗಳ ಸಂಘದಲ್ಲಿ ಆರ್ಥಿಕ ಸಲಹೆಗಾರರು (ಏಪ್ರಿಲ್ 2015– ಮಾರ್ಚ್2017).<br>ಸಂದರ್ಶಕ ಪ್ರಾಧ್ಯಾಪಕರು, ಅಂಬೇಡ್ಕರ್ ಪೀಠ, ಮೈಸೂರು ವಿಶ್ವವಿದ್ಯಾಲಯ (2016–17). |
| ಪ್ರವೃತ್ತಿ | : | ಸಾಹಿತ್ಯ ರಚನೆ, ಸಂಸ್ಕೃತಿ ಚಿಂತನೆ, ಮತ್ತು ಸಮಾಜ ಸೇವೆ. |
| ಕೃತಿಗಳು | | |
| ಕವಿತೆ | : | ಕೊಂಡಿಗಳು ಮತ್ತು ಮುಳ್ಳುಬೇಲಿಗಳು (1989)<br>ಗೋಧೂಳಿ (1993)<br>ನಾನೊಂದು ಮರವಾಗಿದ್ದರೆ (1998)<br>ಮತ್ತೆ ಮಳೆ ಬರುವ ಮುನ್ನ (2000)<br>(ಮೊದಲೆರಡು ಸಂಕಲನಗಳ ಪುನರ್‌ಮುದ್ರಣ) |

ಚಪ್ಪಲಿ ಮತ್ತು ನಾನು (2001)
ಕನಕಾಂಬರಿ (2003)
ಚಂದಿರನ ಕಣ್ಣು ಇಂಗಲಾರದ ಹುಣ್ಣು
(ಆಯ್ದ ಕವನ ಸಂಕಲನ–2004)
ಬುದ್ಧ ಬೆಳದಿಂಗಳು (2010)
ಮಳೆ ಮಿಂದ ನೆಲ (2017)
ಕೊರೊನಾ ಕವಿತೆಗಳು (2020)
ನಮ್ಮ ಎಲುಬಿನ ಹಂದರದೊಳಗೆ (2022)
(ಆಯ್ದ ಕವಿತೆಗಳು)
ಆ ಮಹಾ ಮುಗುಳುನಗೆ (2024)



ನಾಟಕ : ಕೆಂಡಮಂಡಲ (1991)
ಮೂರು ಬೀದಿ ನಾಟಕಗಳು (2004)
ಬಹುರೂಪಿ (ಕಾವ್ಯನಾಟಕ) (2003)
ಮೂಡ್ನಾಕೂಡು ನಾಟಕಗಳು (2010)

ಕಥೆ : ಮೋಹದ ದೀಪ (1999)
ಪಾಪಪ್ರಜ್ಞೆ (2015)

ಲೇಖನ : ನೊಂದವರ ನೋವು (2002)

ಪ್ರಬಂಧ/
ಅಂಕಣ ಬರಹ : ಮಾತು ಮಂಥನ (2004)
ಒಂದು ಕೊಡ ಹಾಲಿನ ಸಮರ (2008)
ಅಪರಿಮಿತದ ಕತ್ತಲೆ (2010)
ಚಿನ್ನುಡಿ (2015)
ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ (2018)
(2022 ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)
ಬುದ್ಧಾನುಸಾಸನಂ (2021)

ಅಂಬೇಡ್ಕರ್ ಅನುಸಂಧಾನ (2021)
ಹೊಸ್ತಿಲ ರಂಗೋಲಿ (2021)
ಬಸವ ದರ್ಶನ (2022)
ಧಮ್ಮಯಾನ (2024)

ವ್ಯಕ್ತಿಚಿತ್ರ : ಭೀಮಾಬೋಯಿ (1994)
ಬೆಳಕಿನ ಸರದಾರರು (2015)

ಪತ್ರಗಳು : ಓಲೆ–ಒಕ್ಕಣೆ (2005)

ಸಂಶೋಧನೆ : ಕಂಗಳ ಮುಂದಣ ಕತ್ತಲು (2018 – 2022)
(ವಿಶ್ವಗ್ರಾಮದಲ್ಲಿ ವಿಶ್ವಮಾನವನಿಲ್ಲ)



ಆತ್ಮಕಥನ : ನೆನಪಿನ ಹಕ್ಕಿಯ ಹಾರಲು ಬಿಟ್ಟು (2020)

ಪ್ರವಾಸ ಕಥನ : ಕವಿತೆಯ ಕೈ ಹಿಡಿದು (2024)

ಅನುವಾದ : ಯುವ ಬೌದ್ಧರಿಗೊಂದು ದರ್ಶನ (2002)
ದೀಘ ನಿಕಾಯ (ಪರಿಷ್ಕರಣೆ– 2012)
ದಲಿತ ದರ್ಶನ (2014) (2022)
ಅಂಗುತ್ತರ ನಿಕಾಯ (2018) [ದಶಕ ನಿಪಾತ]

ಸಂಪಾದನೆ : ದಲಿತ ಕಥೆಗಳು (1996)
ಕಾವ್ಯ ಬಂಗಾರ (2005)
(ದಸರಾ ಕವಿಗೋಷ್ಠಿ 2004 ರ ಕವಿತೆಗಳು)
ಮರಳಿ ಮನೆಗೆ (2006)
(ಪ್ರಧಾನ ಸಂಪಾದಕ– ಅಂಬೇಡ್ಕರ್ ಧಮ್ಮ ದೀಕ್ಷಾ

ಸುವರ್ಣವರ್ಷಾಚರಣೆಯ ಸ್ಮರಣ ಸಂಚಿಕೆ)

**ಕಾವ್ಯ 2005**

(ಕರ್ನಾಟಕ ಸಾಹಿತ್ಯ ಅಕಾಡೆಮಿ  ವಾರ್ಷಿಕ)

**ದಲಿತ ಕಾವ್ಯ**

(ಕನ್ನಡ ಸಾಹಿತ್ಯ ಪರಿಷತ್ತಿನ ವಿಶೇಷ ಮಾಲಿಕೆ – 2019)

**ಬುದ್ಧ ಕಾವ್ಯ**

(ಪಾಲಿ ಅಧ್ಯಯನ ಕೇಂದ್ರ, ಗುಲ್ಬರ್ಗ ವಿಶ್ವವಿದ್ಯಾಲಯ–2020)

**ಇಂಗ್ಲೀಷ್ ಭಾಷೆಯಲ್ಲಿ :** **ದಲಿತ್ ಕಾಸ್ಮೊಸ್ (2023)**

(ರೂಟ್ಲೆಡ್ಜ್ ಯು.ಕೆ.)



**ಮೂಡ್ನಾಕೂಡು ಸಮಗ್ರ ಸಾಹಿತ್ಯ :** **ನಾಲ್ಕು ಸಂಪುಟಗಳಲ್ಲಿ**

**ಕಾವ್ಯ, ಸಂಪುಟ – 1**

**ಕಥೆ ಮತ್ತು ನಾಟಕಗಳು, ಸಂಪುಟ – 2**

**ಪ್ರಬಂಧ– ಲೇಖನಗಳು, ಸಂಪುಟ –3**

**ಸಂಕೀರ್ಣ, ಸಂಪುಟ –4**

**ಪ್ರಕಟಣೆ: ಕನ್ನಡ ಪುಸ್ತಕ ಪ್ರಾಧಿಕಾರ,**

**ಕರ್ನಾಟಕ ಸರ್ಕಾರ – 2018–19**

**ಇತರೆ ಭಾಷೆಗಳಲ್ಲಿ :** **ಕವಿತೆ**

**ಅಂಗಾರ್ ಕೀ ಚೋಟೀ ಪರ್ (ಹಿಂದಿ – 2001)**

ಅನು: ಪ್ರೊ. ಧರಣೇಂದ್ರ ಕುರಕುರಿ

**ಪೊಯೆಮಾಸ್: ಮೂಡ್ನಾಕೂಡು ಚಿನ್ನಸ್ವಾಮಿ (ಸ್ಪ್ಯಾನಿಷ್–2005)**


ಅನು: ಪ್ರೊ. ರೊವೀನಾ ಹಿಲ್

**ಝುಕ್ಮ್ ಕಸಕ್ ಆವಾಜ್ (ಉರ್ದು–2012)**
ಅನು: ನೂರುದ್ದೀನ್ ನೂರ್

**ಬಿಫೋರ್ ಇಟ್ ರೆಯಿನ್ಸ್ ಎಗೆಯ್ನ್ (ಇಂಗ್ಲೀಷ್– 2016)**
ಅನು: ರೊವೀನಾ ಹಿಲ್

**ಇಲಾ ಒಕ ಜೀವಿತಂ (ತೆಲುಗು– 2017)**
**ಅನು: ಸ. ರಘುನಾಥ**
(ಕುವೆಂಪು ಭಾಷಾ ಭಾರತಿ 2018 ರ ಪುಸ್ತಕ ಬಹುಮಾನ ಲಭಿಸಿದೆ).

**ಪಯತಾಣ್ ಅಣೀ ಮಿ (ಮರಾಠಿ–2017)**
ಅನು: ಬಾಬುರಾವ್ ಕಾಂಬ್ಳೆ



**ಕಥೆ** : **ಮೂಗಡಿ ಬಾಧ (ತೆಲುಗು – 2018)**
ಅನು: ರಂಗನಾಥ ರಾಮಚಂದ್ರರಾವ್


**ವಿಚಾರ ಸಾಹಿತ್ಯ** : **ಅಸ್ಮಿತಾ ಕಿ ಖೋಜ್ (ಹಿಂದಿ–2010)**
('ಒಂದು ಕೊಡ ಹಾಲಿನ ಸಮರ' ಗದ್ಯ ಕೃತಿಯ ಅನುವಾದ)
ಅನು: ಭಾಲಚಂದ್ರ ಜಯಶೆಟ್ಟಿ

**ಮಿಲ್ಕ್ ಆಫ್ ಈಕ್ವಾಲಿಟಿ, ಸೌರ್ಡ್ (ಇಂಗ್ಲೀಷ್– 2024)**
(ಒಂದು ಕೊಡ ಹಾಲಿನ ಸಮರ ಕೃತಿಯ ಅನುವಾದ)
ಅನು: ಡಾ. ಜ್ಯೋತಿ ಎಸ್.

## ಲೇಖಕರು ಮತ್ತು ಅವರ ಕೃತಿಗಳನ್ನು ಕುರಿತು

**ಬಯಲ ಬೆಳಕು** (2008)
(ಮೂ.ಚಿ. ಸಾಹಿತ್ಯ ಪರಾಮರ್ಶನ ಗ್ರಂಥ)
ಸಂ. ಅಪ್ಪಗೆರೆ ಸೋಮಶೇಖರ
(ಪರಿಷ್ಕೃತ ಮುದ್ರಣ) (2010)

**ಬೇಯುವ ಬೇಗೆ** (2011)
(ಮೂ.ಚಿ. ಬದುಕು ಮತ್ತು ಸಾಹಿತ್ಯ ಕುರಿತ ಸಂಶೋಧನಾ ಕೃತಿ)
ಡಾ. ಮಲ್ಲಪ್ಪ ಆರ್. ಚಲವಾದಿ



**ಕನ್ನಡ ಕವಿಕಾವ್ಯ ಕುಸುಮ– 40** (2018)
(ಇತರರೊಂದಿಗೆ)
ಸಂ. ಬಿ.ಆರ್. ಲಕ್ಷ್ಮಣರಾವ್, ಇಂದಿರಾ ಸುಂದರ್

**ಬಹುತ್ವ ಕಥನ** (2019)
(65 ರ ಅಭಿನಂದನಾ ಗ್ರಂಥ)
ಸಂ. ಸುಭಾಷ್ ರಾಜಮಾನೆ

**ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ** (2024)
(ಮೂ.ಚಿ. ಸಾಹಿತ್ಯ ಸಮೀಕ್ಷೆ)
ಸಂ. ಡಾ. ಶಿವಕುಮಾರ

## ಸಾಹಿತ್ಯ, ಸಂಸ್ಕೃತಿ, ಸಮಾಜ ಮತ್ತು ರಂಗ ಚಟುವಟಿಕೆಗಳು:

ಸಾಹಿತ್ಯ ಪರಿಷತ್ತು 80, ದಸರಾ ಕವಿಗೋಷ್ಠಿ, ಹಂಪಿ ಉತ್ಸವ,ಲಕ್ಕುಂಡಿ ಉತ್ಸವ, ಕದಂಬೋತ್ಸವ, ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನ –2003, ರಾಜ್ಯ ಮತ್ತು ಕೇಂದ್ರ  ಸಾಹಿತ್ಯ ಅಕಾಡಮಿಗಳು ನಡೆಸಿದ ಪ್ರತಿಷ್ಠಿತ ಕವಿಗೋಷ್ಠಿಗಳಲ್ಲಿ ಕವಿತಾವಾಚನ.

1995 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ  ಮೂಡಿಗೆರೆಯಲ್ಲಿ ನಡೆಸಿದ ಕಾವ್ಯಕಮ್ಮಟದ ನಿರ್ದೇಶಕ (ಡಾ. ಸಿ. ನಾಗಣ್ಣ ಅವರೊಂದಿಗೆ).




1999ರ ಗದಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ.
2007 ರಲ್ಲಿ ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ.

ಮೈಸೂರಿನ ದಸರಾ ಕವಿಗೋಷ್ಠಿ 2003 ಮತ್ತು 2004 ರ ಕಾರ್ಯಾಧ್ಯಕ್ಷತೆ.
ಫೆ.2010, ಗದುಗಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ಅಧ್ಯಕ್ಷತೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜ. 2019 ರ ಕವಿಗೋಷ್ಠಿ– 2 ರ ಅಧ್ಯಕ್ಷತೆ.

“ವಿಶ್ವಗ್ರಾಮದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಭಾರತದ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಸ್ವರೂಪ” ಎಂಬ ಮಹಾ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 2006  ಡಿ.ಲಿಟ್., ಪದವಿ.

ಅಖಿಲ ಭಾರತ ಆಕಾಶವಾಣಿ (AIR) ಗಣರಾಜ್ಯೋತ್ಸವದ ಅಂಗವಾಗಿ ನಾಗಪುರದಲ್ಲಿ ಆಯೋಜಿಸಿದ 2016 ರ ರಾಷ್ಟ್ರೀಯ ಕವಿಗೋಷ್ಠಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ‘ಚಪ್ಪಲಿ ಮತ್ತು ನಾನು’ ಕವಿತಾ ವಾಚನ, 22 ಭಾರತೀಯ ಭಾಷೆಗಳಲ್ಲಿ ಅದರ ಅನುವಾದ, ಆಯಾ ರಾಜ್ಯಕೇಂದ್ರಗಳಲ್ಲಿ ಏಕಕಾಲದಲ್ಲಿ ಪ್ರಸಾರ.

ಏಪ್ರಿಲ್, 2017 ರಲ್ಲಿ ಸಾರಾನಾಥ ದಲ್ಲಿ ನಡೆದ ಹೊರನಾಡು ಸಾಂಸ್ಕೃತಿಕ ಉತ್ಸವದಲ್ಲಿ ಕವಿಗೋಷ್ಠಿ ಅಧ್ಯಕ್ಷತೆ.

ಜನೆವರಿ, 2017 ರಲ್ಲಿ ಐಐಎಚ್ಎಸ್, ಬೆಂಗಳೂರು, ಅಲ್ಲಿ ಕವಿತಾವಾಚನ ಮತ್ತು ಕವಿತೆಗಳ ಕುರಿತು ಚರ್ಚೆ

ದಿ. 12–12–2017 ರಂದು ಕೇಂದ್ರ ಸಾಹಿತ್ಯ ಅಕಾಡೆಮಿ ಜೈನ್ ವಿ.ವಿ. ದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಫ್ರಾನ್ಸ್ ದೇಶದ ಬರಹಗಾರ್ತಿ ಡಾ. ಜುಡಿತ್ ಮಿಸ್ರಾಹಿ ಬರಾಕ್ ಅವರೊಂದಿಗೆ ಭಾಗವಹಿಸಿ ಕವಿತಾವಾಚನ, ಚರ್ಚೆ



ದಿ. 24–12–2017 ರಂದು ಮಹಾರಾಷ್ಟ್ರದ ಶಹಾದ ಪಟ್ಟಣದಲ್ಲಿ ನಡೆದ ವಿದ್ರೋಹಿ ಸಾಹಿತ್ಯ ಸಮ್ಮೇಳನದಲ್ಲಿ ಸಮಾರೋಪ ಭಾಷಣ. ಅಂದು ವಿದ್ರೋಹಿ ಸಂಘಟನೆಯಿಂದ ನನ್ನ ಆಯ್ದ ಕವಿತೆಗಳ ಮರಾಠಿ ಅನುವಾದ 'ಪಯಥಾಣ್ ಅಣಿ ಮಿ' ಕೃತಿ ಬಿಡುಗಡೆ

ದಿ. 21–10–2023 ರಂದು ದಸರಾ ಮಹೋತ್ಸವದ ಪ್ರಧಾನ ಕವಿಗೋಷ್ಠಿಯ ಅಧ್ಯಕ್ಷತೆ.

ಮಾರ್ಚ್ 18, 2024 ರಂದು ಬಿ.ಐ.ಸಿ ಯಲ್ಲಿ ಆರ್ಟ್‌ಮಂತ್ರಮ್ ಅವರು ಏರ್ಪಡಿಸಿದ ಗ್ಲಾಸ್ ಹೌಸ್ ಫೆಸ್ಟಿವಲ್ ಆಫ್ ಪೊಯೆಟ್ರಿ ಯಲ್ಲಿ ಕವಿತಾ ವಾಚನ.

ಕೆಲವು ಕವಿತೆಗಳು ಬೆಂಗಾಲಿ, ತಮಿಳು, ಮಲಯಾಳಂ, ಫ್ರೆಂಚ್ ಹಾಗೂ ಹೀಬ್ರೂ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಪ್ರೊ. ರೊವೀನಾ ಹಿಲ್ ವೆನಿಜುಯೇಲಾ ಕವಿಯತ್ರಿ, ಸ್ಪ್ಯಾನಿಷ್ ಭಾಷೆಗೆ ಭಾಷಾಂತರಿಸಿದ 10 ಕವಿತೆಗಳು ಕೊಲಂಬಿಯಾದ ಸಾಹಿತ್ಯ ಪತ್ರಿಕೆಯಾದ "ಆರ್ಕ್ವಿಟ್ರಾವೆ"ನ ಜೂನ್ 2003 ರ ಸಂಚಿಕೆಯಲ್ಲಿ ಪರಿಚಯದೊಂದಿಗೆ ಪ್ರಕಟವಾಗಿವೆ.

ದಕ್ಷಿಣ ಅಮೆರಿಕದ ವೆನೆಜುಯೇಲಾ ಸರ್ಕಾರ 2005 ರಲ್ಲಿ ಇವರ ಕವಿತೆಗಳನ್ನು 'ವಿಶ್ವ ಕಾವ್ಯ ಮಾಲೆ' (world poetry series) ಅಡಿಯಲ್ಲಿ ಪ್ರಕಟಿಸಿದೆ. ಕನ್ನಡದಿಂದ ಸ್ಪ್ಯಾನಿಷ್ ಭಾಷೆಗೆ ಗ್ರಂಥರೂಪದಲ್ಲಿ ಪ್ರಕಟಗೊಂಡ ಮೊದಲ ಕವಿ ಎಂಬ ಹೆಗ್ಗಳಿಕೆ ಇವರದ್ದಾಗಿದೆ.

ಆಮಿರ್ ಓರ್ ಸಂಪಾದಿಸಿದ ಹೀಬ್ರೂ ಭಾಷೆಯ ವಿಶ್ವ ಕಾವ್ಯ ಸಂಗ್ರಹ–2016 ದಲ್ಲಿ 'ಚಿಂದಿ ಆಯುವ ಚಿಣ್ಣನಿಗೆ' ಮತ್ತು 'ಗಂಧರ್ವ ಮಿಲನ' ಕವಿತೆಗಳ ಅನುವಾದ ಸೇರಿವೆ

ಅನುವಾದಿತ ಇಂಗ್ಲಿಷ್ ಕವಿತೆಗಳು ಇಂಡಿಯನ್ ಲಿಟರೇಚರ್, ದಿ ನ್ಯೂ ಕ್ವೆಸ್ಟ್, ಮತ್ತು ಲಿಟಲ್ ಮ್ಯಾಗಝೀನ್ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಅಂತರ್ಜಾಲ ಪತ್ರಿಕೆ 'ಮ್ಯೂಸ್ ಇಂಡಿಯಾ' ಮತ್ತು ಆಸ್ಟ್ರಿಯಾ ದೇಶದ ಜರ್ಮನ್ ಪತ್ರಿಕೆ Driesch Verlag ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.



ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಕವಿತೆ ವಾಚನ, ಚಿಂತನ, ಭಾಷಣ, ಸಂವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

'ಜರ್ನಲ್ ಆಫ್ ಕಾಮನ್‌ವೆಲ್ತ್ ಲಿಟರೇಚರ್' ಎಂಬ ಬ್ರಿಟನ್ನಿನ ಪ್ರತಿಷ್ಠಿತ ಸಾಹಿತ್ಯ ಪತ್ರಿಕೆ 2019ರ ವಿಶೇಷ ಸಂಚಿಕೆಯಲ್ಲಿ ಇವರ ಸಂದರ್ಶನವನ್ನು ಪ್ರಕಟಿಸಿದೆ.

"ದಿ ಔಟ್‌ಲುಕ್" ಇಂಗ್ಲೀಷ್ ವಾರಪತ್ರಿಕೆ ತನ್ನ 26, ಏಪ್ರಿಲ್ 2021 ರ ಅಂಬೇಡ್ಕರ್ ವಿಶೇಷ ಸಂಚಿಕೆಗಾಗಿ ನಡೆಸಿದ ರಾಷ್ಟ್ರೀಯ ಸಮೀಕ್ಷೆಯಲ್ಲಿ "ಭಾರತವನ್ನು ಪುನರ್‌ನಿರ್ಮಾಣ ಮಾಡುವ 50 ದಲಿತ ಸಾಧಕರಲ್ಲಿ ಇವರು ಒಬ್ಬರಾಗಿದ್ದಾರೆ".


ಜನವರಿ 8, 2023 ರಂದು ಹಾವೇರಿಯಲ್ಲಿ ನಡೆದ ವಿವಾದಿತ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತಿರೋಧವಾಗಿ ಬೆಂಗಳೂರಿನಲ್ಲಿ ನಡೆದ ಜನಸಾಹಿತ್ಯ ಸಮ್ಮೇಳನವನ್ನು ಉದ್ಘಾಟನೆ ಮಾಡಲಾಯಿತು.

ದಿ. 7/8–10–2023 ರಂದು ಕೇರಳದ ಕಲ್ಲಿಕೋಟೆಯ ಮರ್ಕ್ಕಝ್ ನಾಲೆಡ್ಜ್ ಸಿಟಿಯಲ್ಲಿ ದಕ್ಷಿಣ ಭಾರತದ ಮೀಮ್ ಕವಿಗೋಷ್ಠಿ ಉದ್ಘಾಟನೆ. ನಂತರ ಎರಡು ಮಲಯಾಳಂ ಪತ್ರಿಕೆಗಳಿಂದ [ರಿಸಾಲ ಸಾಪ್ತಾಹಿಕ ಮತ್ತು ಪ್ರವಾಸಿ ವಯಾನ] ಸಂದರ್ಶನ.

ಅಕ್ಟೋಬರ್, 2023 ರ "ಕಾರವಾನ್" ಪತ್ರಿಕೆಯಲ್ಲಿ ಕವಿಯ ಬದುಕು ಮತ್ತು ಸಾಹಿತ್ಯ ಕುರಿತ ಶ್ರೀಕರ್ ರಾಘವನ್ ಅವರ ಸುದೀರ್ಘ ಲೇಖನ ಪ್ರಕಟವಾಗಿದೆ.

ಫ್ರೆಂಚ್ ಇನ್ಸ್ಟಿಟ್ಯುಟ್ ಆಫ್ ಇಂಡಿಯಾ, ಪುದುಚೇರಿ ದಿ. 23/24-11-2023 ರಂದು ನಡೆಸಿಕೊಟ್ಟ ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಕವಿತಾ ವಾಚನ ಮತ್ತು ಪ್ರಬಂಧ ಮಂಡನೆ ಮಾಡಲಾಯಿತು.

## ರಾಷ್ಟ್ರೀಯ/ಅಂತಾರಾಷ್ಟ್ರೀಯ ಕಾರ್ಯಕ್ರಮಗಳು :



ವಾ.ಕ.ರ.ಸಾ.ನಿಗಮ, ಗದಗ ವಿಭಾಗದ ಅತ್ಯುತ್ತಮ ಕಾರ್ಯಾಚರಣೆಗೆ 1999 ರಲ್ಲಿ ಟೊರಾಂಟೋದಲ್ಲಿ ನಡೆದ 53 ನೇ ಅಂತರರಾಷ್ಟ್ರೀಯ ಸಾರ್ವಜನಿಕ ಸಾರಿಗೆ ಸಮ್ಮೇಳನಕ್ಕೆ ಪ್ರತಿನಿಯೋಜನೆ. ಅಮೆರಿಕಾ ಮತ್ತು ಕೆನಡಾ ದೇಶಗಳ ಪ್ರವಾಸ.

ಮೈಸೂರಿನಲ್ಲಿ ಜನವರಿ 2003 ರಲ್ಲಿ ನಡೆದ 3ನೇ ಏಷಿಯಾ ಪೆಸಿಫಿಕ್ ಮತ್ತು 109 ನೇ ಇಂಡಿಯ ಮತ್ತು ಕೆನೆಡಿಯನ್ ಸ್ಟಡೀಸ್ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಕವಿತಾ ವಾಚನ ಮತ್ತು ಆ ಕವಿತೆಗಳ ಮೇಲೆ ಚರ್ಚೆ.

ಮೇ, 2004 ರಲ್ಲಿ ಹಾಲಿವುಡ್(ಲಾಸ್ ಏಂಜಲೀಸ್) ನ ಬೋಧಿ ಟ್ರೀ ಆಶ್ರಯದಲ್ಲಿ ಆಹ್ವಾನಿತ ಶ್ರೋತೃಗಳ ಮುಂದೆ ಕವಿತಾ ವಾಚನ, ಚರ್ಚೆ.

ಮೇ, 2004 ರಲ್ಲಿ ವೆನೆಜುಯೇಲಾ ದೇಶದ ಮೆರಿಡಾ ರಾಜ್ಯದ ಆಹ್ವಾನದ ಮೇರೆಗೆ ಆ್ಯಂಡಿಸ್ ವಿಶ್ವವಿದ್ಯಾಲಯದಲ್ಲಿ 'ಭಾರತದಲ್ಲಿ ಜಾತಿ ಪದ್ದತಿ:ಅಂದು-ಇಂದು' ಮತ್ತು 'ದಕ್ಷಿಣ ಭಾರತದ ಪ್ರತಿಭಟನಾ ಕಾವ್ಯ' ಎಂಬ ವಿಷಯಗಳನ್ನು ಕುರಿತು ಉಪನ್ಯಾಸ.

ರಾಜಧಾನಿ ಕ್ಯಾರಕಾಸ್‌ನ ಸಂಸ್ಕೃತಿ ಕೇಂದ್ರದಲ್ಲಿ ಕಾವ್ಯ ವಾಚನ ಮತ್ತು ಅಲ್ಲಿನ ವೆಬ್ ಸೈಟ್‌ನಲ್ಲಿ ಸ್ಪ್ಯಾನಿಷ್ ಅನುವಾದಿತ ಕವಿತೆಗಳ ಪ್ರಕಟಣೆ. ದಕ್ಷಿಣ ಅಮೇರಿಕಾ ಪ್ರವಾಸ.

ಫೆ. 2007 ರಲ್ಲಿ ಮಧ್ಯ ಅಮೆರಿಕಾದ ನಿಕರಾಗುವಾ ದೇಶದಲ್ಲಿ ನಡೆದ 'ಗ್ರೆನೆಡಾ ಅಂತರ ರಾಷ್ಟ್ರೀಯ ಕಾವ್ಯಮೇಳ' ದಲ್ಲಿ ಭಾಗವಹಿಸಿ ದೇಶದ ಇತರ ಭಾಗಗಳಲ್ಲಿ ನಡೆದ ಅನೇಕ ಕಾರ್ಯಕ್ರಮಗಳಲ್ಲಿ ಕವಿತಾ ವಾಚನ ಮತ್ತು ಉಪನ್ಯಾಸ.

ಅ. 2007 ರಲ್ಲಿ ಇಸ್ರೇಲ್ ದೇಶದ ರಾಜಧಾನಿ ಟೆಲ್ ಅವಿವ್‌ನಲ್ಲಿ ನಡೆದ 'ಶಾರ್ ಅಂತರರಾಷ್ಟ್ರೀಯ ಕಾವ್ಯಮೇಳ'ದಲ್ಲಿ ಕವಿತಾವಾಚನ. ಅದಕ್ಕಾಗಿ ಕೆಲವು ಕವಿತೆಗಳನ್ನು ಹೀಬ್ರೂ ಭಾಷೆಗೆ ಅನುವಾದಿಸಲಾಗಿದೆ. ಹಾಗೂ ಇವರ ಇ-ಮೇಲ್ ಸಂದರ್ಶನವನ್ನು ಹೀಬ್ರೂ ನಿಯತಕಾಲಿಕೆ 'ಹೆಲಿಕಾನ್' ದಲ್ಲಿ ಪ್ರಕಟಿಸಲಾಗಿದೆ. ಅಲ್ಲಿನ ಟಿವಿಯಲ್ಲಿ ಕಾವ್ಯವಾಚನ ಮತ್ತು ಪತ್ರಿಕೆಗಳಿಗೆ ಸಂದರ್ಶನ ನೀಡಲಾಗಿದೆ.



ಜೆರುಸಲೆಮ್ ನಗರದಲ್ಲಿ 'ನಾನೊಂದು ಮರವಾಗಿದ್ದರೆ' ಕವಿತೆಯ ರಂಗರೂಪದ ಏಕವ್ಯಕ್ತಿ ಪ್ರದರ್ಶನವನ್ನು ಸಮ್ಮೇಳನದ ಭಾಗವಾಗಿ ಏರ್ಪಡಿಸಲಾಗಿತ್ತು.

ಸ್ವೀಡಿಷ್ ಪತ್ರಕರ್ತ ಮಿ.ಪೀಟರ್ ನೆಡೆಸಿದ ಸಂದರ್ಶನವನ್ನು ಡಿಸೆಂಬರ್, 6, 2006 ರಂದು ಆಸ್ಟ್ರಿಯ, ಜರ್ಮನಿ ಮತ್ತು ಸ್ವೀಡನ್ ದೇಶಗಳ ಆಕಾಶವಾಣಿಯಲ್ಲಿ ಬಿತ್ತರಿಸಲಾಗಿದೆ.

ಟರ್ಕಿ ದೇಶದ ಇಸ್ತಾಂಬುಲ್ ನಗರದಲ್ಲಿ ನವೆಂಬರ್ 2008 ರಲ್ಲಿ ನಿವೃತ್ತೋತ್ತರ ಸೌಲಭ್ಯಗಳ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಾಯಿತು.

ಮೇ 22, 2009 ರಿಂದ ಮೇ, 27 ರ ವರೆಗೆ ದಕ್ಷಿಣ ಆಫ್ರಿಕಾ ಪ್ರವಾಸ. ಜೊಹಾನಸ್ ಬರ್ಗ್ ಪ್ರಿಟೋರಿಯ ಮತ್ತು ಸನ್ ಸಿಟಿ ನಗರಗಳಿಗೆ ಭೇಟಿ.

ಅಮೆರಿಕಾದ ನ್ಯೂಜರ್ಸಿಯಲ್ಲಿ ನಡೆದ ಅಕ್ಕ-2010 ಕನ್ನಡ ಸಮ್ಮೇಳನದಲ್ಲಿ ಉಪನ್ಯಾಸ, ಕವಿತಾ ವಾಚನ.

2010 ರ ನವೆಂಬರ್ ನಲ್ಲಿ ಹಾಂಕಾಂಗ್ ನಲ್ಲಿ ಸಾರ್ವಜನಿಕ ಸಾರಿಗೆಯ ಹಣಕಾಸು ನೀತಿ ಕುರಿತು ಯುಐಟಿಪಿ ಏಸಿಯಾ ಪೆಸಿಫಿಕ್ ಕಾಂಗ್ರೆಸ್ ನಡೆಸಿದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಾಯಿತು. ಮಕಾವ್ ಮತ್ತು ಶಾಂಘೈ ನಗರಗಳಿಗೆ ಭೇಟಿ ನೀಡಿ ನಗರ ಸಾರಿಗೆ ಕುರಿತು ಅಧ್ಯಯನ ನಡೆಸಲಾಯಿತು

ಮೇ, 2013 ರಲ್ಲಿ ಸ್ವಿಟ್ಜರ್ಲ್ಯಾಂಡಿನ ಜಿನೀವಾ ನಗರದಲ್ಲಿ ನಡೆದ ಸಾರಿಗೆ ಸಮ್ಮೇಳನದಲ್ಲಿ ಭಾಗಿ ಮತ್ತು ಯುರೋಪ್ ಪ್ರವಾಸ.

2014 ರ ಬೆಂಗಳೂರು ಲಿಟರರಿ ಫೆಸ್ಟಿವಲ್ ನಲ್ಲಿ  ಕವಿತಾವಾಚನ ಮತ್ತು ಚರ್ಚೆ.

ದಿ.29–30, ಜೂನ್ 2015 ರಲ್ಲಿ ಇಂಗ್ಲೆಂಡಿನ, ನಾರ್ವಿಚ್ ನಗರದ ಯೂನಿವರ್ಸಿಟಿ ಆಫ್ ಈಸ್ಟ್ ಆಂಗ್ಲಿಯಾ ದಲ್ಲಿ ನಡೆದ 'ದಲಿತ್ ಲಿಟರೇಚರ್ ಇನ್ ಟ್ರಾನ್ಸಲೇಷನ್' ಕುರಿತು ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆ, ಕವಿತಾ ವಾಚನ, ಚರ್ಚೆ.



ಮೇ 11–27, 2016 ರಲ್ಲಿ ಇಂಗ್ಲೆಂಡಿನ ನಾಟಿಂಗ್ಹ್ಯಾಮ್ ವಿಶ್ವವಿದ್ಯಾಲಯದಲ್ಲಿ ಏಎಚ್ಆರ್‌ಸಿ ನೆಟ್ವರ್ಕ್ ಆಹ್ವಾನದ ಮೇರೆಗೆ ಕಾವ್ಯವಾಚನ, ಸಂವಾದ, ಸಾರ್ವಜನಿಕ ವೇದಿಕೆ, ವೈರ್ಡ್ ಕೆಫೆಯಲ್ಲಿ ಕವಿತೆ ಓದು.

ಮಾರ್ಚ್ 10–15, 2020 ರಲ್ಲಿ ಪ್ಯಾರಿಸ್ ನ ಗ್ರಂಥಾಲಯಗಳಲ್ಲಿ ನಡೆದ 'ಆನ್ ಪೇಜ್, ಆನ್ ಸ್ಟೇಜ್' ಕಾರ್ಯಕ್ರಮಗಳಲ್ಲಿ ಕವಿತಾವಾಚನ ಮತ್ತು ಸಂವಾದ

ಅಕ್ಟೋಬರ್ 13–17, 2022 ಎಎಚ್ಆರ್‌ಸಿ, ಯುಕೆ, ಆಹ್ವಾನದ ಮೇರೆಗೆ ನಿವ್ ಆರ್ಟ್ ಎಕ್ಸ್ಚೇಂಜ್, ನಾಟಿಂಗ್‌ಹ್ಯಾಮ್ ನಲ್ಲಿ ಕವಿತಾವಾಚನ ಮತ್ತು ದುಂಡುಮೇಜಿನ ಚರ್ಚೆ.

ದಿ. 14–10–2022 ರಂದು ವರದಿಗಾರ್ತಿ ಹನ್ನಾ ಬಿಬಿಸಿ ರೇಡಿಯೋಗಾಗಿ ಸಂದರ್ಶನ ಮಾಡಿದರು. ಅದು 17–10–22 ರ ಭಾನುವಾರ ಬಿತ್ತರವಾಗಿದೆ. ಅದೇ ದಿನ ನಾಟ್ಸ್ ಟಿ ವಿ ಯಲ್ಲಿ ಸುದ್ದಿಗಾರ್ತಿ ಸುದ್ದಿ ಪ್ರಸಾರ ವೇಳೆ ಲೈವ್ ಸಂದರ್ಶನ ಮಾಡಿದರು.

ದಿ. 28–03–2024 ರಂದು ಆಕಾಶವಾಣಿ ಬೆಂಗಳೂರು ಕೇಂದ್ರವು ದೂರದರ್ಶನದ ಸಹಯೋಗದೊಂದಿಗೆ ಏರ್ಪಡಿಸಿದ್ದ ರಾಷ್ಟ್ರೀಯ ಯುಗಾದಿ ಕವಿಗೋಷ್ಠಿಯ ಅಧ್ಯಕ್ಷತೆ.

ದಿ. 9–08–2024 ರಂದು ಬುಕ್ ಬ್ರಹ್ಮ ದಕ್ಷಿಣ ಭಾರತ ಸಾಹಿತ್ಯೋತ್ಸವದಲ್ಲಿ ಭಾಗವಹಿಸಲಾಯಿತು

## ಸಂಘ ಸಂಸ್ಥೆ ಸಮುದಾಯ ಚಟುವಟಿಕೆಗಳಲ್ಲಿ;

ದಲಿತ ಸಂಘಟನೆಗಳು ಮತ್ತು ರಂಗತಂಡಗಳೊಡನೆ ಸಕ್ರಿಯ ಪಾತ್ರ.
ಅಧ್ಯಕ್ಷರು, ಸಂಬುದ್ಧ ಎಜುಕೇಷನ್ ಅಂಡ್ ಚಾರಿಟಬಲ್ ಟ್ರಸ್ಟ್, ಚಾಮರಾಜನಗರ.
ಗೌರವಾಧ್ಯಕ್ಷರು, ಅಂತರರಾಷ್ಟ್ರೀಯ ಬೌದ್ಧ ಯುವ ಸಂಘಟನೆ, ಚಾಮರಾಜನಗರ ಶಾಖೆ.
ಸಂಸ್ಥಾಪಕ ಅಧ್ಯಕ್ಷರು, ಬೌದ್ಧ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ, ಗದಗ.
ಸಂಸ್ಥಾಪಕ ನಿರ್ದೇಶಕರು, ದಲಿತ ಸಾಹಿತ್ಯ ಪರಿಷತ್, ರಾಜ್ಯ ಘಟಕ, ಗದಗ.
ಸದಸ್ಯರು, ದಲಿತ ಅಧ್ಯಯನ ಪೀಠ, ಕನ್ನಡ ವಿ.ವಿ. ಹಂಪಿ, 2007–08.
ಸದಸ್ಯ, ಪ್ರಕಟಣಾ ಮಂಡಳಿ, ಕನ್ನಡ ಸಾಹಿತ್ಯ ಪರಿಷತ್ತು –2016.
ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ – 2016
ಸದಸ್ಯ, ಪುಸ್ತಕ ಆಯ್ಕೆ ರಾಜ್ಯ ಸಮಿತಿ, ಕರ್ನಾಟಕ ಗ್ರಂಥಾಲಯ ಇಲಾಖೆ,2018–19
ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ – 2023



## ರಂಗಭೂಮಿ/ ದೃಶ್ಯ ಮಾಧ್ಯಮ:

ರಂಗಾಯಣ, ಮೈಸೂರು ನಡೆಸಿದ ರಾಷ್ಟ್ರೀಯ ನಾಟಕೋತ್ಸವ –2003 ರಲ್ಲಿ 'ಬಹುರೂಪಿ' ಕಾವ್ಯನಾಟಕದ ರಚನೆ ಮತ್ತು ನಿರ್ದೇಶನ

ಜ್ಞಾನಪೀಠ ಪ್ರಶಸ್ತಿ ವಿಜೇತರ ನಾಟಕೋತ್ಸವದಲ್ಲಿ ಡಾ. ಯು.ಆರ್. ಅನಂತಮೂರ್ತಿಯವರ ಕಥೆಯಾಧಾರಿತ 'ಮೌನಿ' ನಾಟಕ ನಿರ್ದೇಶನ

ಕೃಪಾಕರ್ ಸೇನಾನಿ ನಿರ್ದೇಶನದ ಪೂ.ಚಂ.ತೇ ಅವರನ್ನು ಕುರಿತ ಸಾಕ್ಷ್ಯ ಚಿತ್ರ 'ಮಾಯಾಲೋಕ'ದಲ್ಲಿ ಕರ್ವಾಲೊ ಪಾತ್ರದಲ್ಲಿ ನಟನೆ

## ಪಠ್ಯ ಪುಸ್ತಕಗಳಲ್ಲಿ:

'ಕೆಂಡಮಂಡಲ' ನಾಟಕ ಕರ್ನಾಟಕ ವಿ. ವಿ. ಯ ಬಿ. ಎ. ದ್ವಿತೀಯ ಸೆಮ್ ಗೆ ಪಠ್ಯವಾಗಿದೆ.

ಸುಮಾರು 50 ಕ್ಕೂ ಹೆಚ್ಚು ಕವಿತೆಗಳು ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಭಾಷಾ ಪಠ್ಯಪುಸ್ತಕಗಳಲ್ಲಿ ಪಠ್ಯವಾಗಿವೆ.

ಮಹಾರಾಷ್ಟ್ರ ಸರ್ಕಾರವು ಮೊದಲ ಪಿ.ಯು. ಕನ್ನಡ ವಿಷಯಕ್ಕೆ 'ನಾನೊಂದು ಮರವಾಗಿದ್ದರೆ' ಕವಿತೆಯನ್ನು ಪಠ್ಯವಾಗಿ ಅಳವಡಿಸಿದೆ.



ಸಿ.ಬಿ.ಎಸ್.ಸಿ 12ನೆಯ ತರಗತಿಯ ಕನ್ನಡ ಭಾಷಾ ವಿಷಯಕ್ಕೆ 'ರೈಲಿನ ಅಂತರಂಗ–ಬಹಿರಂಗ' ಕವಿತೆ ಪಠ್ಯವಾಗಿದೆ.

ಪಶ್ಚಿಮ ಬಂಗಾಲ ವಿಶ್ವವಿದ್ಯಾಲಯದ ಇಂಗ್ಲಿಷ್ ಪಠ್ಯದಲ್ಲಿ ಅನುವಾದಿತ ಕವಿತೆಗಳನ್ನು ಬೋಧಿಸಲಾಗುತ್ತಿದೆ.

ಇಂಗ್ಲೆಂಡಿನ ನಾಟಿಂಗ್ಯಾಮ್ ಟ್ರೆಂಟ್ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಅನುವಾದಿತ ಕೃತಿ 'ಬಿಫೋರ್ ಇಟ್ ರೆಯಿನ್ಸ್ ಅಗೆಯ್ನ್' ಕೃತಿಯನ್ನು ಪಠ್ಯವಾಗಿ ಬೋಧಿಸಲಾಗುತ್ತಿದೆ.

## ಬಹುಮಾನ/ ಪುರಸ್ಕಾರ:

ನಾಡಚೇತನ ಪ್ರಶಸ್ತಿ– ರಂಗಚೇತನ ಸಂಸ್ಥೆ ಬೆಂಗಳೂರು.

1999 ರಲ್ಲಿ ಟೊರಾಂಟೋ ಕನ್ನಡ ಸಂಘ, ಕೆನಡಾ ಇವರಿಂದ ಪುರಸ್ಕಾರ.

ನಾನೊಂದು ಮರವಾಗಿದ್ದರೆ ಕೃತಿಗೆ ಶೂದ್ರ ಪತ್ರಿಕೆಯ ಜಿ.ಎಸ್.ಎಸ್. ಕಾವ್ಯ ಸ್ಪರ್ಧೆ 1998 ರಲ್ಲಿ ಪ್ರಥಮ ಬಹುಮಾನ.

ವಾರಂಬಳ್ಳಿ ಕಾವ್ಯ ಪ್ರಶಸ್ತಿ 1999.

ಮೃತ್ಯುಂಜಯ ಸಾರಂಗಮಠ ಕಾವ್ಯಪ್ರಶಸ್ತಿ 1999.

ಮೋಹದ ದೀಪ ಕಥಾ ಸಂಕಲನಕ್ಕೆ ಶಿರಸಂಗಿ ಲಿಂಗರಾಜ ಸಾಹಿತ್ಯ ಪ್ರಶಸ್ತಿ, 2000 ಅಥಣಿ,

ಅಪರಿಮಿತದ ಕತ್ತಲೆ ಕೃತಿಗೆ ಡಾ. ನಾಗಲೋಟಿಮಠ ಸಾಹಿತ್ಯ ಪ್ರಶಸ್ತಿ,

ಬಹುತ್ವ ಭಾರತ ಮತ್ತು ಬೌದ್ಧ ತಾತ್ವಿಕತೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ– 2022

2001– ಬೇಂದ್ರೆ ಪ್ರಶಸ್ತಿ, ಬೇಂದ್ರೆ ಸಾಹಿತ್ಯ ಪ್ರತಿಷ್ಠಾನ, ಧಾರವಾಡ ಜಿಲ್ಲೆ



2007 ರಲ್ಲಿ ನಿಕರಾಗುವಾ ದೇಶದಲ್ಲಿ ನಡೆದ ಅಂತಾರಾಷ್ಟ್ರೀಯ ಕಾವ್ಯ ಸಮ್ಮೇಳನದಲ್ಲಿ ಗ್ರೆನೆಡಾ ಮತ್ತು ಡಿರಿಯಾಂಬಾ ನಗರಾಡಳಿತಗಳು ಕ್ರಮವಾಗಿ 'ಡಿಸ್ಟಿಂಗ್ವಿಷ್ಡ್ ವಿಸಿಟರ್ ಮತ್ತು 'ಇಲ್ಲಸ್ಟ್ರಿಯಸ್ ವಿಸಿಟರ್' ಎಂಬ ಮಾನಪತ್ರಗಳನ್ನು ನೀಡಿ ಗೌರವಿಸಿವೆ.

2009 –ಡಾ. ರಾಗೌ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸಂಘ, ಮಂಡ್ಯ

2009 –ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕನ್ನಡ ಕ್ರಿಯಾ ಸಮಿತಿಯಿಂದ 'ಸಾರಿಗೆ ರತ್ನ' ಪ್ರಶಸ್ತಿ

2009 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

2013 ರಲ್ಲಿ ಆಳ್ವಾಸ್ ನುಡಿಸಿರಿ ಪ್ರಶಸ್ತಿ

2014 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

2015 ರಲ್ಲಿ ಮಲ್ಲೇಪುರಂ ಜಿ. ವೆಂಕಟೇಶ ಸಾಹಿತ್ಯ ಪ್ರಶಸ್ತಿ, ಮಲ್ಲೇಪುರಂ ಪ್ರತಿಷ್ಠಾನ

2016 ರಲ್ಲಿ ಬಿ. ಬಸವಲಿಂಗಪ್ಪ ಸಾಹಿತ್ಯ ಪ್ರಶಸ್ತಿ.

2016 – ಜಗದ್ಗುರು ಶ್ರೀ ತೋಟದಾರ್ಯ ಸಿದ್ದಲಿಂಗೇಶ್ವರ ಮಠದಿಂದ ಪುರಸ್ಕಾರ, ಗದಗ

2018 – ಕರ್ನಾಟಕ ಬೌದ್ಧ ಸಮಾಜದಿಂದ ಧಮ್ಮ ಸಮ್ಮಾನ್ ರಾಷ್ಟ್ರೀಯ ಪ್ರಶಸ್ತಿ.

2018 – ಮುರುಗಾಶ್ರೀ ಪ್ರಶಸ್ತಿ, ಶ್ರೀ ಮುರುಗಾ ಮಠ, ಚಿತ್ರದುರ್ಗ ಇವರಿಂದ.

2021 – ಪೆರಿಯಾರ್ ಪ್ರಶಸ್ತಿ– 2021, ವಿಚಾರವಾದಿಗಳ ವೇದಿಕೆ, ಕರ್ನಾಟಕ [ವಿವೇಕ].

2023 – ನಾಗಪುರದ ಬುದ್ಧಿಸ್ಟ್ ಫ್ರೆಟರ್ನಿಟಿ ಕೌನ್ಸಿಲ್ ಅವರಿಂದ ಬೆಂಗಳೂರಿನಲ್ಲಿ 'ಧಮ್ಮ ಗೌರವ' ಸನ್ಮಾನ



2023 – ಒಡಿಸ್ಸಾ ಸರ್ಕಾರದಿಂದ 5 ನೆಯ ಪುಸ್ತಕಮೇಳದ ಅಂಗವಾಗಿ ಭುವನೇಶ್ವರದಲ್ಲಿ "ಅಕ್ಷರ" ಪುರಸ್ಕಾರ.

2024 – ಶಿವರಾಮ ಕಾರಂತ ಪ್ರಶಸ್ತಿ, ಮೂಡಬಿದಿರೆ

ಮಾರ್ಚ್2010, ರಲ್ಲಿ ನಡೆದ ಚಾಮರಾಜನಗರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.
ಕಲ್ಯಾಣ ನಾಡಿನ ಶರಣ ಪರಿಷತ್ತು, 2011ರ ಏಪ್ರಿಲ್, 20–22 ರಂದು ಆಯೋಜಿಸಿದ್ದ ಕಲ್ಯಾಣ ನಾಡಿನ ಶರಣ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

ದಲಿತ ಸಾಹಿತ್ಯ ಪರಿಷತ್ತು ಕೊಪ್ಪಳದಲ್ಲಿ 2011 ಜೂ. 18, 19 ರಂದು ಏರ್ಪಡಿಸಿದ ಅಖಿಲ ಕರ್ನಾಟಕ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

ದಿ. 21–07–2024 ರಂದು ರಂಗಮಂಡಲ ಬೆಂಗಳೂರು ಚಾಮರಾಜನಗರದಲ್ಲಿ ಆಯೋಜಿಸಿದ್ದ ಕಾವ್ಯ ಸಂಸ್ಕೃತಿ ಯಾನದ ಸರ್ವಾಧ್ಯಕ್ಷತೆ.

## ಕವಿಯನ್ನು ಕುರಿತು



ಕರ್ನಾಟಕ ಸಾಹಿತ್ಯ ಅಕಾಡೆಮಿ ಕವಿ ಮೂಡ್ನಾಕೂಡು ಎಂಬ ಸಾಕ್ಷ್ಯ ಚಿತ್ರವನ್ನು ನಿರ್ಮಿಸಿ ತನ್ನ ವೆಬ್ ಸೈಟಿನಲ್ಲಿ ಪ್ರಕಟಿಸಿದೆ.

ವಾರ್ತಾ ಮತ್ತು ಪ್ರಚಾರ ಇಲಾಖೆಯು 'ನೆಲದ ಸಿರಿ' ಮಾಲಿಕೆಯಡಿಯಲ್ಲಿ 10 ನಿಮಿಷಗಳ ಒಂದು ಸಾಕ್ಷ್ಯ ಚಿತ್ರವನ್ನು ನಿರ್ಮಿಸಿದೆ.

'ಮುಂಜಾನೆ ಸೂರ್ಯ' ಧ್ವನಿ ಸುರುಳಿಯನ್ನು ಲಹರಿ ಆಡಿಯೋ ಸಂಸ್ಥೆ ಹೊರತಂದಿದೆ.

ದೂರದರ್ಶನ ಮತ್ತು ಇತರ ದೃಶ್ಯವಾಹಿನಿಗಳಲ್ಲಿ ಸಂದರ್ಶನ, ಚರ್ಚೆಗಳು ಬಿತ್ತರವಾಗಿವೆ.

'ಮೂಡ್ನಾಕೂಡು ಚಿನ್ನಸ್ವಾಮಿ ಬದುಕು ಬರಹ' ಸಂಶೋಧನಾ ಮಹಾಪ್ರಬಂಧಕ್ಕೆ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಮಲ್ಲೇಶಪ್ಪ ಎಂಬುವರಿಗೆ ಪಿ.ಎಚ್.ಡಿ. ಲಭಿಸಿದೆ.

ಕವಿಯ ಕೃತಿಗಳನ್ನು ಕುರಿತು ನಡೆದ ವಿಚಾರಸಂಕಿರಣಗಳು ಮತ್ತು ಇತರ ಬರಹಗಳನ್ನು ಸಂಗ್ರಹಿಸಿ ಬಯಲ ಬೆಳಕು ಎಂಬ ಗ್ರಂಥವನ್ನು ಡಾ. ಅಪ್ಪಗೆರೆ ಸೋಮಶೇಖರ ಅವರು ಸಂಪಾದಿಸಿ 'ದೇಸಿ ಪುಸ್ತಕ'ದಿಂದ ಪ್ರಕಟಿಸಿದ್ದಾರೆ (ಎರಡು ಮುದ್ರಣಗಳು).

"ಬಹುತ್ವ ಕಥನ" ಅಭಿನಂದನಾ ಗ್ರಂಥವನ್ನು ಕವಿಯ 65ನೆಯ ಹುಟ್ಟುಹಬ್ಬದಂದು ಸುಭಾಷ್ ರಾಜಮಾನೆ ಸಂಪಾದಕತ್ವದಲ್ಲಿ ಹೊರತರಲಾಯಿತು.

"ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ" ದಿ 22–02–2024 ರಂದು ನಡೆದ ಮೂ. ಚಿ. ಸಾಹಿತ್ಯ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ/ ಭಾಷಣಗಳ ಸಂಗ್ರಹವನ್ನು ಕವಿಯ 70 ನೆಯ ಹುಟ್ಟುಹಬ್ಬದಂದು ಬಿಡುಗಡೆಗೊಳಿಸಲಾಯಿತು.

## ಮೂಡ್ನಾಕೂಡು ಚಿನ್ನಸ್ವಾಮಿ ಸಾಹಿತ್ಯ ಸಂಕಿರಣ/ಚರ್ಚೆ

- ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲೆ, ದಿ. 06.04.03 ರಂದು ಒಂದು ದಿನದ ವಿಚಾರ ಸಂಕಿರಣ

- ಭಾರತ ಯಾತ್ರಾ ಕೇಂದ್ರ ಮತ್ತು ರಂಗವಾಹಿನಿ, ಚಾಮರಾಜನಗರ, 'ಹೊನ್ನೇರು ಬಂತು ತನ್ನೂರಿಗೆ' ಎಂಬ ಶೀರ್ಷಿಕೆಯಡಿ ದಿ. 14 ನವೆಂಬರ್ 2004 ರಂದು ವಿಚಾರ ಸಂಕಿರಣ ನಡೆಸಿತು



- ದಲಿತ ಸಾಹಿತ್ಯ ಪರಿಷತ್ತು, ಕಲಬುರ್ಗಿಯಲ್ಲಿ ದಿ. 9 ನೇ ಜನೆವರಿ 2005 ರಂದು ವಿಚಾರ ಸಂಕಿರಣ ಹಮ್ಮಿಕೊಂಡಿತ್ತು.

- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸೆಪ್ಟೆಂಬರ್ 2005 ರಲ್ಲಿ "ಕಾವ್ಯದ ಹೊಸ ಓದು" ಎಂಬ ಕಾರ್ಯಕ್ರಮವನ್ನು ಗುಲ್ಬರ್ಗಾದಲ್ಲಿ ಹಮ್ಮಿಕೊಂಡು ಇವರ ಕಾವ್ಯವನ್ನು ಕುರಿತು ಚರ್ಚೆ ನಡೆಸಿದೆ.

- ಝೆನ್ ರೈಟರ್ಸ್ ಫೋರಮ್ 'ಕವಿ ಮೂಡ್ನಾಕೂಡು ಕಾವ್ಯ ಪ್ರವಾಸ: ಒಂದು ಸಂವಾದ' ಕಾರ್ಯಕ್ರಮವನ್ನು ದಿ. 20–01–2008 ರಂದು ನಡೆಸಿದೆ.

- ಬೆಂಗಳೂರು ವಿ.ವಿ, ಕನ್ನಡ ಅಧ್ಯಯನ ಕೇಂದ್ರದಲ್ಲಿ ಜನೆವರಿ, 2013 ರಲ್ಲಿ ರೊವೀನಾ ಹಿಲ್ ರವರ ಜತೆ ಕಾವ್ಯ ವಾಚನ ಮತ್ತು ಚರ್ಚೆ

- ಸುಚಿತ್ರಾ ಸಾಹಿತ್ಯ ವೇದಿಕೆ, ಬೆಂಗಳೂರು ಇಲ್ಲಿ ಕಾವ್ಯ ವಾಚನ ಮತ್ತು ಚರ್ಚೆ.

- ಉ. ಕ. ಜಿಲ್ಲೆಯ 'ಕಾವ್ಯಬೋಧಿ' ವೇದಿಕೆಯಿಂದ ದಿ 21–3–2014 ರಂದು ಹೊನ್ನಾವರದಲಿ ಕಾವ್ಯ ವಾಚನ ಮತ್ತು ಸಂವಾದ.



- ದಿ. 31–10–2014 ರಂದು ಹೈದರಾಬಾದಿನ ಇ.ಎಫ್. ಎಲ್. ವಿ.ವಿ. ಯ ಇಂಗ್ಲಿಷ್ ವಿಭಾಗದಲ್ಲಿ ಕಾವ್ಯ ವಾಚನ ಮತ್ತು ಚರ್ಚೆ

- ದಿ. 14–11–2014 ರಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿ.ವಿ. ಯ ರಾಜ್ಯಶಾಸ್ತ್ರ ವಿಭಾಗದಲ್ಲಿ ಕವಿತಾ ವಾಚನ ಮತ್ತು ಸಂವಾದ.

- ದಿ. 22–06–2015 ರಂದು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬೆಂಗಳೂರಿನ ಕಥೇರಿ ಸಭಾಂಗಣದಲ್ಲಿ 'ಕವಿಸಂಧಿ' ಕಾರ್ಯಕ್ರಮ, ಕವನ ವಾಚನ ಮತ್ತು ಸಂವಾದ.

- ದಿ. 19–02–2018 ರಂದು ಬೆಂಗಳೂರು ಆಕಾಶವಾಣಿಯ ಎಫ್. ಎಮ್. ಕೇಂದ್ರದಿಂದ ಸಂದರ್ಶನ ನೇರ ಪ್ರಸಾರ

- ದಿ. 30–04–2018 ರಂದು ದೂರದರ್ಶನ ಚಂದನ ವಾಹಿನಿಯಲ್ಲಿ 'ಶುಭೋದಯ' ನೇರಪ್ರಸಾರ ಕಾರ್ಯಕ್ರಮದಲ್ಲಿ ಬೌದ್ಧ ಚಿಂತನೆ ಕುರಿತು ಸಂದರ್ಶನ.

- ದಿ. 31–05–2018 ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವತಿಯಿಂದ 'ಚಕೋರ' ಕಾರ್ಯಕ್ರಮ. ಮೂಡ್ನಾಕೂಡು ಕಾವ್ಯಾನುಸಂಧಾನ, ಕವಿತೆಗಳ ವಾಚನ, ಸಂವಾದ

- ಚಾಮರಾಜನಗರದಲ್ಲಿ ದಿ. 22–12–2018 ರಂದು ಕನ್ನಡ ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ 'ಸಾಧಕರೊಡನೆ ಸಂವಾದ' ಕಾರ್ಯಕ್ರಮದಲ್ಲಿ ಚರ್ಚೆ.

- ಬುಕ್‌ಬ್ರಹ್ಮ ಆನ್ ಲೈನ್ ವೆಬ್ ಮ್ಯಾಗಝೈನ್ ಸಂದರ್ಶನ

- ದಿ. 26–01–2023 ಗಣರಾಜ್ಯ ದಿನದಂದು ಭಾರತೀಯ ವಿದ್ಯಾರ್ಥಿ ಸಂಘಟನೆಯಿಂದ ಸನ್ಮಾನ

● 18) ದಿ. 22–02–2023 ರಂದು ಭಾರತೀಯ ವಿದ್ಯಾರ್ಥಿ ಸಂಘಟನೆ ಮತ್ತು ಮೈಸೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ಬಿ.ಎಂ.ಶ್ರೀ ಸಭಾಂಗಣದಲ್ಲಿ 'ಮೂಡ್ನಾಕೂಡು ಸಾಹಿತ್ಯ' ಕುರಿತು ಒಂದು ದಿನದ ವಿಚಾರ ಸಂಕಿರಣ.

● 19) ದಿ. 26–03–23 ರಂದು ಗದುಗಿನಲ್ಲಿ ಲಡಾಯಿ ಪ್ರಕಾಶನ, ದಲಿತ ಸಾಹಿತ್ಯ ಪರಿಷತ್ತು ಮತ್ತಿತರ ಸಂಘಟನೆಗಳಿಂದ 'ಮೂಡ್ನಾಕೂಡು ಸಾಹಿತ್ಯದಲ್ಲಿ ತಾತ್ತ್ವಿಕ ನೆಲೆಗಳು' ಎಂಬ ವಿಷಯವಾಗಿ ವಿಚಾರ ಸಂಕಿರಣ. ಖ್ಯಾತನಾಮರಿಂದ ಪ್ರಬಂಧ ಮಂಡನೆ ಮತ್ತು ಸಂವಾದ.

## ಪ್ರಮುಖ ವೆಬಿನಾರ್‌ಗಳು



ದಿ. 19–06–2021 ರಂದು ಬ್ರಾಹ್ಮಣ, ಬ್ರಾಹ್ಮಣ್ಯ ಕುರಿತು ಪ್ರಜಾವಾಣಿ ಎಫ್.ಬಿ. ಲೈವ್ ಕಾರ್ಯಕ್ರಮ ನೇರ ಪ್ರಸಾರ.

ಆಕಾಶವಾಣಿ ಬೆಂಗಳೂರು ಸಾಹಿತ್ಯ ದಿಗ್ಗಜರೊಡನೆ ನಡೆಸುವ 'ಕ್ಷಿತಿಜ' ಲಿಟರರಿ ಗುರು ಕಾರ್ಯಕ್ರಮದಲ್ಲಿ ದಿ. 25–06–2021 ರಂದು ಸಂದರ್ಶನ. ಕರ್ನಾಟಕದ ಎಲ್ಲ ಕೇಂದ್ರಗಳಲ್ಲಿಯೂ ಏಕಕಾಲಕ್ಕೆ ಪ್ರಸಾರ.

ದಿ. 23–06–2021 ರಂದು ಕೊರೊನಾ ಕಾಲದಲ್ಲಿ ಆಗಿದ್ದು ಆಗಬೇಕಾದ್ದು ಪ್ರಜಾವಾಣಿ ಏರ್ಪಡಿಸಿದ ಸರಣಿ ಉಪನ್ಯಾಸಸಲ್ಲಿ ಶೋಷಿತರ ಸಂಕಟಗಳು ಕುರಿತು ಮಾತು.

ದಿ. 12–5–2023 ರಂದು ಅಂಬೇಡ್ಕರ್ ಸ್ಟಡಿ ಸರ್ಕಲ್, ಚಿಕ್ಕಮಂಗಳೂರು ಇವರಿಂದ 'ಬುದ್ಧ ಮತ್ತು ಧಮ್ಮ' ಕುರಿತು ಚರ್ಚೆ.

ವಿಳಾಸ
ಡಾ. ಮೂಡ್ನಾಕೂಡು ಚಿನ್ನಸ್ವಾಮಿ
"ಕಾವ್ಯಬೋಧಿ" #558, 3ನೆಯ ಮೇನ್, ಕೆ.ಜಿ. ರಸ್ತೆ
ಬಿ.ಎಚ್.ಇ.ಎಲ್. ಬಡಾವಣೆ, 2ನೆಯ ಹಂತ
ರಾಜರಾಜೇಶ್ವರಿ ನಗರ, ಬೆಂಗಳೂರು– 560098

## ನಾನೊಂದು ಮರವಾಗಿದ್ದರೆ

ನಾನೊಂದು ಮರವಾಗಿದ್ದರೆ
ಹಕ್ಕಿ ಗೂಡುಕಟ್ಟುವ ಮುನ್ನ ಕೇಳುತ್ತಿರಲಿಲ್ಲ
ನೀನು ಯಾವ ಕುಲ
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಿಗಾಗುತ್ತಿರಲಿಲ್ಲ ಮೈಲಿಗೆ
ತಂಬೆಲರ ಕೂಡ ಎಲೆಗಳ ಸ್ನೇಹ
ಮಧುರವಾಗಿರುತ್ತಿತ್ತು


ಮಳೆ ಹನಿಗಳು ನಾನು ಶ್ವಪಚನೆಂದು
ಹಿಂದೆ ಸರಿಯುತ್ತಿರಲಿಲ್ಲ.
ನಾನು ಬೇರೂರಿ ಕುಡಿಯಿಡುತ್ತಿರುವಾಗ
ಭೂದೇವಿ ಮಡಿ ಮಡಿ ಎಂದು ಓಡುತ್ತಿರಲಿಲ್ಲ

ಪವಿತ್ರ ಗೋವು ನನ್ನ ತೊಗಟೆಗೆ
ತನ್ನ ಮೈ ಉಜ್ಜಿ ತುರಿಕೆ ತೀರಿಸಿಕೊಳ್ಳುವಾಗ
ಅದರ ಅಂಗಾಂಗಗಳಲ್ಲಿ ಅಡರಿಕೊಂಡ ಮುಕ್ಕೋಟಿ ದೇವತೆಗಳು
ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು.

ಯಾರಿಗೆ ಗೊತ್ತು ನನ್ನ ಅಂತ್ಯ ಕಾಲದಲ್ಲಿ
ಕಡಿದು ತುಂಡಾದ ಒಣ ಸೀಳೊಂದು
ಹೋಮಾಗ್ನಿಯಲ್ಲಿ ಬೆಂದು ಪಾವನವಾಗುತ್ತಿತ್ತೇನೊ

ಅಥವಾ ಸತ್ಪುರುಷನೊಬ್ಬನ ಹೆಣಕ್ಕೆ
ಚಟ್ಟವಾಗಿ ನಾಲ್ಕು ಜನ ಸಜ್ಜನರ
ಹೆಗಲೇರಬಹುದಿತ್ತೆ?

**–ಮೂಡ್ನಾಕೂಡು ಚಿನ್ನಸ್ವಾಮಿ**





# ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ವ್ಯಕ್ತಿ ಪರಿಚಯ